ಶ್ರೀ ಬಿ.ಎಸ್. ಯಡಿಯೂರಪ್ಪ :- ಎಷ್ಟು ಜನರಿಗೆ ಉದ್ಯೋಗ ಕೊಟ್ಟಿದ್ದೀರಿ ಎಂದರೆ ಇಲ್ಲ. ಬೋಗಸ್ ಕಾರ್ಯಕ್ರಮ ಇದು .

ಅಧ್ಯಕ್ಷರು : ಸಾಕು. ನಾನು ಈಗ ಮುಂದಿವ ಪ್ರಶ್ನೆಗೆ ಹೋಗಿದ್ದೇನೆ....

ಶ್ರೀ ಬಿ. ಎಸ್. ಯಡಿಯೂರಪ್ಪ : ವಿಶ್ವ ಯೋಜನೆಯ ಪ್ರಚಾರ ತೆಗೆದುಕೊಂಡಿರಿ. ಜನರಿಗೆ ಟೋಪಿ ಹಾಕಿದಿರಿ. ಯಾರೊಬ್ಬರಿಗೂ ಉದ್ಯೋಗ ಕೊಟ್ಟಿಲ್ಲ.

(ಗೊಂದಲ)

ಅಧ್ಯಕ್ಷರು : ತಾವು ಮಾತನಾಡುವುದು ರೆಕಾರ್ಡ್ ಆಗುವುದಿಲ್ಲ. ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ಬಿ.ಎಸ್. ಯಡಿಯೂರಪ್ಪ : ಮನಸ್ಸಿಗೆ ಬಂದಹಾಗೆ ಉತ್ತರ ಕೊಟ್ಟರೆ ಹೇಗೆ? ನಮಗೆ ಬೇಕಾದ ಉತ್ತರ ಸಿಗದಿದ್ದರೆ ನಾವು ಇಲ್ಲಿ ಕೆಲಸ ಮಾಡುವುದು? ಇದು ಬೋಗಸ್ ಕಾರ್ಯಕ್ರಮ

ವಿಷಯ : ಬೀರೂರು ಹೋಬಳ್ಳಿಯಲ್ಲಿ ಸಾಗುವಳಿ ಚೀಟಿ ನೀಡುವುದು

ಚುಕ್ಕೆ ಗುರುತಿನ ಪ್ರಶ್ನೆ : 128(192)

ಶ್ರೀ ಡಿ.ಬಿ. ಚಂದ್ರೇಗೌಡ (ತೀರ್ಥಹಳ್ಳಿ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಕಡೂರು ತಾಲ್ಲೂಕು ಬೀರೂರು ಹೋಬಳಿ ಎಮ್ಮೆದೊಡ್ಡಿ ಗ್ರಾಮಕ್ಕೆ ಸೇರಿದ ಸರ್ವೆ ನಂ. 77,73 ಮತ್ತು 72 ಮತ್ತು 74 ರಲ್ಲಿ ವಿವಿಧ ಜನಾಂಗಕ್ಕೆ ಸೇರಿದ ಸದಸ್ಯರುಗಳಿಗೆ 1977 ರಲ್ಲಿ ತಾತ್ಕಾಲಿಕ ಸಾಗುವಳಿ ಚೀಟಿ ನೀಡಲಾಗಿದೆಯೇ;

ಆ) ಈ ತಾತ್ಕಾಲಿಕ ಸಾಗುವಳಿ ಚೀಟಿಯನ್ನು 1981 ರಲ್ಲಿ ಖಾಯಂ ಗೊಳಿಸಲಾಗಿತ್ತೆ;

ಇ) ತಾತ್ಕಾಲಿಕವಾಗಿ ಸಾಗುವಳಿ ಚೀಟಿಯನ್ನು ಎಷ್ಟು ಜನಕ್ಕೆ ಕೊಡಲಾಗಿದೆ;

ಈ) ಖಾಯಂ ಸಾಗುವಳಿ ಚೀಟಿಯನ್ನು ಎಷ್ಟು ಜನಕ್ಕೆ ಕೊಡಲಾಗಿದೆ

ಉ) ಹೀಗೆ ಕೊಟ್ಟ ಸಾಗುವಳಿ ಚೀಟಿಗಳಿಗೆ ಟಿ.ಟಿ.ದಂಡ ಕಂದಾಯ ಇವುಗಳನ್ನು ಫಲಾನುಭವಿಗಳಿಂದ ವಸೂಲು ಮಾಡಲಾಗಿದೆಯೇ;

ಊ) 1994ರಲ್ಲಿ ದರಕಾಸ್ತು ಅರ್ಜಿಗಳನ್ನೇನಾದರೂ ವಜಾ ಮಾಡಲಾಗಿದೆಯೇ;

ಋ) ಹಾಗೆ ಮಾಡಿದ್ದಲ್ಲಿ, ಕಾರಣಗಳೇನು?

ಶ್ರೀ. ಧರ್ಮಸಿಂಗ್ (ಕಂದಾಯ ಸಚಿವರು)

ಅ) ಹೌದು
ಆ) ಹೌದು
ಇ) 248
ಈ) 248
ಉ) ಹೌದು
ಊ) ಸದರಿ ಮಂಜೂರಾತಿಯನ್ನು 1982ರಲ್ಲಿ ವಜಾ ಮಾಡಲಾಗಿದೆ.
ಋ) ಮದಗದ ಕೆರೆಯ ಪ್ರದೇಶ ಮತ್ತು ಅದರಲ್ಲಿರುವ ಮರಗಳನ್ನು ರಕ್ಷಿಸುವಂತೆ ಚಿಕ್ಕಮಗಳೂರು ಜುಲ್ಲಾಧಿಕಾರಿಗಳು ನಿರ್ದೇಶನ ನೀಡಿದ ಪ್ರಕಾರ ಉಪ ವಿಭಾಗಾಧಿಕಾರಿಗಳು ಸಹಾಯಕ ಕಾರ್ಯಕಾರಿ ಅಭಿಯಂತರರು ಮತ್ತು ವಲಯ ಅರಣ್ಯ ಅಧಿಕಾರಿಗಳು ಜೊತೆಗೂಡಿ ದಿನಾಂಕ 5-11-81 ರಂದು ಮಂಜೂರಾಗಿರುವ ಜಮೀನಿನ ಸ್ಥಳ ಪರೀಕ್ಷಣೇ ಮಾಡಿ ಈ ಜಮೀನು ಮದಗದ ಕೆರೆಯಿಂದ ಸುಮಾರು 1.5 ಕಿ.ಮೀರಿಂದ 2 ಕಿ.ಮೀ ಅಂತರದೊಳಗೆ ಇದೆಯೆಂಬುದನ್ನು ಕಂಡಿದ್ದಾರೆ. ಸದರಿ ಜಮೀನನ್ನು ಸಾಗುವಳಿ ಉಪಯೋಗಿಸಲು ಅವಕಾಶ ಮಾಡಿದರೆ, ಕೆರೆಯು ಹೂಳಿನಿಂದ ತುಂಬುತ್ತದೆ ಮತ್ತು ಅಚ್ಚುಕಟ್ಟು ಪ್ರದೇಶದ 7000 ಎಕರೆ ಜಮೀನಿಗೆ ತೊಂದರೆ ಉಂಟಾಗುತ್ತದೆ. ಅಲ್ಲದೆ ಈ ಜಮೀನನ್ನು ವಿಲೇವಾರಿ ಮಾಡಿದಲ್ಲಿ ಅದರಲ್ಲಿರುವ ಮನ್ನಾಜಾತಿಯವುಗಳೂ ಸೇರಿದ ಮರಗಳು ನಾಶವಾಗುತ್ತವೆ ಎಂಬ ಅಂಶಗಳನ್ನು ಗಣನೆಗೆ ತೆಗೆದುಕೊಂಡು ಕರ್ನಾಟಕ ಭೂ ಕಂದಾಯ ಕಾಯ್ದೆಯ ಕಲಂ 56ರಲ್ಲಿ ಪ್ರದತ್ತವಾಗಿರುವ ಅಧಿಕಾರವನ್ನು ಚಲಾಯಿಸಿ ಉಪ ವಿಭಾಗಾಧಿಕಾರಿ, ತರೀಕೆರೆ ಇವರು ಈ ಹಿಂದೆ ತಹಸೀಲ್ದಾರ್, ಕಡೂರು ಇವರು 248 ಜನರಿಗೆ ಮಂಜೂರು ಮಾಡಿದ್ದ 634 ಎಕರೆ ಜಮೀನಿನ ಮಂಜೂರಾತಿಯನ್ನು ದಿನಾಂಕ 13-4-1982ರಂದು ರುದ್ದಗೊಳಿಸಿರುತ್ತಾರೆ.

ಶ್ರೀ ಡಿ. ಬಿ. ಚಂದ್ರೇಗೌಡ :- ಮಾನ್ಯ ಅಧ್ಯಕ್ಷರೇ, ಕಡೂರು ತಾಲ್ಲೂಕಿನಲ್ಲಿ ಬೀರೂರು ಹೋಬಳಿ ಎಮ್ಮೆದೊಡ್ಡಿಯಲ್ಲಿ ಸುಮಾರು 248 ಜನರಿಗೆ 1977 ರಲ್ಲಿ ಭೂಮಿ ಮಂಜೂರು ಮಾಡಿ 81-82ರಲ್ಲಿ ಭೂಮಿಯನ್ನು ಖಾಯಂಗೊಳಿಸಿದ್ದಾರೆ . ಫಲಾನುಭವಿಗಳು ಎಲ್ಲ ಹರಿಜನ, ಗಿರಿಜನರು , ಕುರುಬರು, ಲಂಬಾಣಿಗಳು ಇವರಿಗೆ ಸೇರಿದ ಜಮಿನು. ಸುಮಾರು 640 ಎಕರೆ ಪ್ರದೇಶವನ್ನು ಅವರಿಗೆ ಕೊಟ್ಟರು. ಹೀಗೆ ಕೊಟ್ಟಿದ್ದನ್ನು ಒಪ್ಪಿಕೊಂಡಿದ್ದಾರೆ ಕನ್‌ಫರ್ಮ್ ಮಾಡಿದ್ದನ್ನೂ ಒಪ್ಪಿಕೊಂಡಿದ್ದಾರೆ. ಅದಾದಮೇಲೆ ನಾನು ಮಾನ್ಯ ಕಂದಾಯ ಮಂತ್ರಿಗಳನ್ನು ಕೇಳುತ್ತೇನೆ. ಅದನ್ನು ಈಗ ವಜಾ ಮಾಡಿದ್ದಾರೆ. ಮಂಜೂರಾತಿಗೆ ಪೂರ್ವಭಾವಿಯಾಗಿ ಯಾವ ಜಮೀನನ್ನು ಮಂಜೂರು ಮಾಡಬೇಕಾಗಿತ್ತೋ ಅದನ್ನು ಮಂಜೂರು ಮಾಡತಕ್ಕಂಥ ಅಧಿಕಾರಿ ಅದರ ಮಂಜೂರಿಯ ಮುಖ್ಯವಾದ ವಿವೇಚನೆಯನ್ನು ಬಳಿಸಿ ಮಾಡಬೇಕಾಗಿತ್ತು. ಈ ವಿವೇಚನೆಯನ್ನು ಅವರು ಬಳಸಿದ್ದಾರೋ ಇಲ್ಲವೋ, ಅದು ನನಗೆ ಗೊತ್ತಿಲ್ಲ ರೈತರು ಭೂಮಿ ಕೇಳಿರತಕ್ಕಂಥಾದ್ದು ಪ್ರಚಾರಕ್ಕಾಗಿ ಅಲ್ಲ. ಮಾನ್ಯ ಅಧ್ಯಕ್ಷರೇ, ಅಲ್ಲಿ ಆ ಭೂಮಿಗೆ ಕಟ್ಟಬೇಕಾದಂಥ ತಾತ್ಕಾಲಿಕ ಸಾಗುವಳಿ ಚೀಟಿ, 5.2.81ರಲ್ಲಿ ಖಾಯಂ ಸರ್ವೆ ಚೀಟಿ, ಸಂಬಂಧಪಟ್ಟ ಪಹಣಿ ದಾಖಲೆಯಲ್ಲಿ ಅವರುಗಳ ಹೆಸರು ಇದೆ. ಅವರಿಂದ ಅವಶ್ಯಕವಾದಂಥ ಕಂದಾಯವನ್ನು ಕಟ್ಟಿಸಿಕೊಂಡಿದ್ದೀರಿ. ಮತ್ತೆ ಟಿ.ಟಿ. ದಂಡ, ಇವುಗಳನ್ನು ಕಟ್ಟಿಸಿಕೊಂಡಿರುವುದರ ಜೊತೆಗೆ ಊರನ್ನು ರೆಕಗ್ನೈಸ್ ಮಾಡಿ ಸ್ಕೂಲನ್ನು

ಕೊಟ್ಟಿದ್ದಾರೆ, ಬಾವಿಯನ್ನು ಕೊಟ್ಟಿದ್ದಾರೆ. ಎಲ್ಲೋ ಒಂದು ಕಡೆ ಆಸ್ಪತ್ರೆಯನ್ನೂ ತೆಗೆದಿದ್ದೀರಿ. ಈಗ ಅದು ಮಂಜೂರಾತಿ ಸರಿಯಲ್ಲ, ಮದಗದ ಕೆರೆಗೆ ತೊಂದರೆಯಾಗುತ್ತದೆ. ಎಂದು ಹೇಳಿ ಅದನ್ನು ವಜಾ ಮಾಡತಕ್ಕಂಥ ನಿರ್ಣಯಕ್ಕೆ ನೀವು ಬಂದಿದ್ದೀರಿ. ನಿಮ್ಮಲ್ಲಿ ನಾನು ಒಂದು ಪ್ರಶ್ನೆಯನ್ನು ಕೇಳುತ್ತೇನೆ. ಗ್ರಾಮಸ್ಥರೆಲ್ಲ ಸೇರಿ ಒಂದು ಅರ್ಜಿಯನ್ನು ಕೊಟ್ಟಿದ್ದಾರೆ. ಫಾರಂ ನಂಬರ್ 50ರಲ್ಲಿ ಅರ್ಜಿ ಹಾಕಿ ಈ ಅರ್ಜಿಯನ್ನು ಖಾಯಂಗೊಳಿಸಿ ಎಂದು. ಫಾರಂ 50ರಲ್ಲಿ ಅರ್ಜಿ ಹಾಕಿದ್ದೇವೆ. ನೀವು ಕೊಟ್ಟಿರತಕ್ಕಂಥ ನಿಬಂಧನೆಯಲ್ಲಿ ಅಕ್ರಮ ಸಾಗುಳಿವಯನ್ನು ಸಕ್ರಮಗೊಳಿಸುವಂಥಾದ್ದು ಹೊಸದಾಗಿ ಏನು ಮಾಡಿದ್ದೀರಿ ಅದರಲ್ಲಿ ಈ ಭಾರಿ ಇಲ್ಲ. ಯಾವುದೇ ಕೆರೆಗೆ ಅಡ್ಡಿಯಾಗುತ್ತದೆ, ಅದನ್ನು ಕೊಡಬೇಡಿ ಎಂದು ಇಲ್ಲ. ಆದ್ದರಿಂದ ಅದನ್ನು ಫಾರಂ 50ರಲ್ಲಿ ಕೊಡತಕ್ಕಂಥ ಆಲೋಚನೆಯನ್ನು ಏನಾದರೂ ಸರ್ಕಾರ ಮಾಡುತ್ತದೆಯೆ?

ಶ್ರೀ ಧರ್ಮಸಿಂಗ್ : ಮಾನ್ಯ ಸಭಾಧ್ಯಕ್ಷರೇ, ಈಗ ಮಾನ್ಯ ಹಿರಿಯ ಸದಸ್ಯರಾದ ಶ್ರೀ ಚಂದ್ರೇಗೌಡರು ಏನು ಪ್ರಶ್ನೆಯನ್ನು ಹಾಕ್ಕಿದ್ದಾರೆ, ಅದಲ್ಲದಕ್ಕೆ ಉತ್ತರ ಕೊಟ್ಟಿದ್ದೇವೆ.

10 : 11ಸಿ

ಏಕೆಂದರೆ ಈ ಕಡೂರಿನ ಆ ಗ್ರಾಮದಲ್ಲಿ ಇರತಕ್ಕಂಥ 248 ಜನರಿಗೆ ನಾವು 634 ಎಕರೆ ಜಮೀನು ಕೊಟ್ಟಿದ್ದೇವೆ . 77ರಲ್ಲಿ ಇದನ್ನು ಕೊಡಲಾಗಿದೆ ಮತ್ತು 81ರಲ್ಲಿ ಖಾಯಂ ಕೂಡ ಮಾಡಿದ್ದೇವೆ ಎಂಬ ಮಾತನ್ನು ಹೇಳಿದ್ದಾರೆ. ಇದು 82ರಲ್ಲಿ ಖಾಯಂಗೊಳಿಸಿದ್ದೇವೆ. ಟಿ.ಟಿ. ಫೈಲನ್ನು ಕೂಡ ತೆಗೆದುಕೊಂಡಿದ್ದೇವೆ, ಮತ್ತು ಪಕ್ಕಾ ಆಗಿ ಸಾಗುವಳಿ ಚೀಟಿಯನ್ನು ಮಾಡಿದ್ದೇವೆ. ಆದರೆ ಜಿಲ್ಲಾಧಿಕಾರಿಗಳು ಮದಗದಕೆರೆ ಅಚ್ಚುಕಟ್ಟು ಪ್ರದೇಶ ಇದೆ, ಏಳುಸಾವಿರ ಎಕರೆ ನೀರಾವರಿ ಆಗತಕ್ಕಂಥ ಪ್ರದೇಶ ಇದೆ, ಮತ್ತು ಮರಗಳನ್ನು ಬೆಳೆಯುವುದಕ್ಕೆ ಅವಕಾಶ ಸಿಗುವುದಿಲ್ಲ ಎನ್ನುತಕ್ಕಂಥ ರೀತಿಯಲ್ಲಿ ಕೂಡ ಜಿಲ್ಲಾದ್ದಿಕಾರಿಗಳು ಇದನ್ನು ಇನ್‌ಸ್ಪೆಕ್ಷನ್ ಮಾಡಿದ್ದಾರೆ . ಅವರ ಸಮಕ್ಷಮದಲ್ಲಿ ಇನ್‌ಸ್ಪೆಕ್ಷನ್ ಮಾಡಿದನಂತರ ಅದಕ್ಕೆ ಪ್ರಾವಿಷನ್ ಇದೆ. ಇವತ್ತು ನೀವು ಟಿ.ಟಿ. ಫೈಲ್, ಸಾಗುವಳಿ ಚೀಟಿ ಬರೆಸಿಕೊಂಡು ಕಂದಾಯವನ್ನು ಕೂಡ ಪಡೆದುಕೊಂಡು 248 ಜನರಿಗೆ ಭೂಮಿ ಇಲ್ಲದಿರುವಹಾಗೆ ಮಾಡಿದ್ದೀರಿ ಎಂದು ಹೇಳಿದ್ದೀರಿ. ಆದರೆ ಅಲ್ಲಿರತಕ್ಕಂಥ ಜಿಲ್ಲಾಧಿಕಿರಿಗಳಿಗೆ ಏಳು ಸಾವಿರ ಎಕರೆ ಜಮೀನಿಗೆ ನೀರು ಹೋಗುವ ರೀತಿಯಲ್ಲಿ ಆ ಕೆರೆ ಅಂಗಳದಲ್ಲಿ ಕೊಡತಕ್ಕಂಥ ರೀತಿಯಲ್ಲಿ ತೊಂದರೆಯಾಗಿದೆ. ಆದ್ದರಿಂದ ಇದನ್ನು ರದ್ದುಪಡಿಸಬಹುದು ಎನ್ನತಕ್ಕಂಥ ರೀತಿಯಲ್ಲಿ ಅವರು ನಿರ್ಣಯ ತೆಗೆದುಕೊಂಡಿದ್ದಾರೆ. ಈಗ ಲಾರ್ಜರ್ ಇಂಟರೆಸ್ಟ್‌ನಿಂದ ಸರ್ಕಾರ ಈಗಗಾಲೇ ಒಂದು ತೀರ್ಮಾನವನ್ನು ತೆಗೆದುಕೊಂಡಿದೆ. ಎಲ್ಲಿ ಕೆರೆ ಅಂಗಳ ಇದೆ ಎಲ್ಲಿ ಅಕ್ರಮ ಸಾಗುವಳಿ ಮಾಡುತ್ತಿದ್ದರೆ ಅದನ್ನು ಸಕ್ರಮಗೊಳಿಸಬೇಕೆಂದು ಸರ್ಕಾರದ ಧೋರಣೆ ಇದ್ದರೂ ಕೂಡ ಕೆರೆ ಅಂಗಳದಲ್ಲಿ ಕೊಡಬಾರದು ಎಂದು ಇದೆ. ಜಿಲ್ಲಾಧಿಕಾರಿಗಳು ಕೂಡ ಪಬ್ಲಿಕ್ ಇಂಟರೆಸ್ಟ್ ಸಲುವಾಗಿ ಇದು ರೈತರಿಗೆ ಹೋಗತಕ್ಕಂಥ ನೀರಿನ ಸಂಬಂಧಪಟ್ಟಂತೆ ಇದೆ, ಆದ್ದರಿಂದ ಇದನ್ನು ಹಾಗೆ ಮಾಡಿದ್ದಾರೆ.

ಶ್ರೀ ಡಿ. ಬಿ. ಚಂದ್ರೇಗೌಡ :- ಮಾನ್ಯ ಅಧ್ಯಕ್ಷರೇ, ಇದು ಕೆರೆ ಅಂಗಳ ಅಲ್ಲ. ದಯವಿಟ್ಟು ಮಾನ್ಯ ಕಂದಾಯ ಮಂತ್ರಿಗಳು ಪದ ಬಳಕೆ ಮಾಡುವಾಗ ಎಚ್ಚರಿಕೆ ವಹಿಸಬೇಕು. ಇದು ಕೆರೆಯಿಂದ ಎರಡು ಕಿಲೋಮಿಟರ್ ದೂರ ಇರತಕ್ಕದ್ದು. ಭೂಮಿಯನ್ನು ಕೊಡುವುದಕ್ಕೆ ಮುಂಚೆ ಅವರು ಅಲ್ಲಿ 35 ವರ್ಷಗಳಿಂದ ಸಾಗುವಳಿ ಮಾಡುತ್ತಿದ್ದಾರೆ . ಇವರೆಲ್ಲ ಹರಿಜನಗಿರಿಜನರು, ಲಂಬಾಣಿಗಳು ಕುರುಬರು ಈ ವರ್ಗಕ್ಕೆ ಸೇರಿದ ಜನ. ಭೂಮಿಯನ್ನು ಕೊಡುವಾಗ ಈ ಆಲೋಚನೆ ಸರ್ಕಾರಕ್ಕೆ ಅಥವಾ ಸಂಬಂಧಪಟ್ಟ ಅಧಿಕಾರಿಗೆ ಇರಲಿಲ್ಲವೇ? ಒಂದುವೇಳೆ ಕೆರೆ ಪ್ರದೇಶದಲ್ಲಿ ಕೊಡಬಾರದು ಎಂದು ನಿಬಂಧನೆ ಇದ್ದರೆ ಅದು ಎಷ್ಟು ಫಾಸಲೆಯೊಳಗೆ ಜಮೀನು ಕೊಡಬಾರದು ಎಂದು ಸರ್ಕಾರದವರು ಏನಾದರೂ ನಿಗದಿಪಡಿಸಿದ್ದಾರೆಯೆ? ಹಾಗೆ ನಿಗದಿ ಪಡಿಸಿದ್ದರೆ ಅಂತಹ ದೇಶ ಕಂದಾಯ ಇಲಾಖೆಯಲ್ಲಿದೆಯೆ? ಕಂದಾಯ ಮಂತ್ರಿಗಳೇ, ನಾನು ನೀರಾವರಿ ಮಂತ್ರಿಯಾಗಿದ್ದವನು. ನಿಮ್ಮ ಎಫ್.ಟಿ.ಎಲ್. ಅಂದರೆ, ಫುಲ್ ಟ್ಯಾಂಕ್ ಲೆವಲ್‌ನಿಂದ ಮೂವತ್ತು ಅಡಿ ಎಂದು ಇರುವುದು. ಆದರೆ ಇದು ಎರಡು ಕಿಲೋಮೀಟರ್ ದೂರದಲ್ಲಿದೆ. 250 ಕುಟುಂಬಗಳು ಮೂವತ್ತೈದು ವರ್ಷಗಳಿಂದ ಜಮೀನು ಮಾಡಿಕೊಂಡು ಬಂದಿದ್ದಾರೆ. ಅವರು ಒಳ್ಳೆಯ ಬೇಸಾಯ ಮಾಡಿದರು, ಬೆಳೆ ತೆಗೆದರು. ಮನೆ ಕಟ್ಟಿದರು, ಊರು ಕಟ್ಟಿದರು. ಒಂದೇ ಅಲ್ಲ ಏಳೆಂಟು ಊರುಗಳನ್ನು ಕಟ್ಟಿದ್ದಾರೆ. ಇದು ಎರಡು ಕಿಲೋ ಮಿಟರ್ ಆಚೆ ಇರುವಾಗ ಇವರಿಗೆ ಈ ಮರಗದ ಕೆರೆಯ ಮಣ್ಣು ಬರುತ್ತದೆಯೆಂದು ಜ್ಞಾನೋದಯ ಆಯಿತೇನು? ಆದ್ದರಿಂದ ದಯವಿಟ್ಟು ನಿಮ್ಮ ಹತ್ತಿರ ನೋಟಿಫಿಕೇಷನ್ ಇದ್ದರೆ, ಎಫ್.ಟಿ.ಎಲ್‌ನಿಂದ ಇಷ್ಟು ದೂರಕ್ಕೆ ಇರುವುದಕ್ಕೆ ಕೊಡಬಾರದು ಎಂದು ಇದ್ದರೆ ಅದನ್ನು ಹೇಳಿ.

ಶ್ರೀ ಧರ್ಮಸಿಂಗ್ : ಕೆರೆ ಅಂಗಳಕ್ಕೆ ಇಷ್ಟು ದೂರ ಇರಬೇಕು ಎನ್ನುವುದರ ಬಗ್ಗೆ ಬೇರೆ ಪ್ರಶ್ನೆಗೆ ಹೇಳುತ್ತೇನೆ. ಈಗ ನಾನು ಹೇಳತಕ್ಕದ್ದು ಇಷ್ಟೆ. ಅಲ್ಲಿರತಕ್ಕಂಥ ಅಚ್ಚುಕಟ್ಟು ಪ್ರದೇಶದಲ್ಲಿ ಈ ರೀತಿಯಾಗಿ ಸಾಗುವಳಿಗೆ ಅವಕಾಶ ಕೊಟ್ಟರೆ, ಏಳು ಸಾವಿರ ಎಕರೆ ಜಮೀನಿಗೆ ತೊಂದರೆಯಾಗುತ್ತದೆ ಎನ್ನತಕ್ಕಂಥ ರೀತಿಯಲ್ಲಿ ಲಾರ್ಜರ್ ಇಂಟರೆಸ್ಟ್‌ನಿಂದ ಮಾಡಿದ್ದಾರೆ.

ಶ್ರೀ ಡಿ. ಬಿ. ಚಂದ್ರೇಗೌಡರು :- ಅವರು 35 ವರ್ಷಗಳಿಂದ ಸಾಗುವಳಿ ಮಾಡುತ್ತಿದ್ದಾರೆ, ಅವರಿಗೆ ತೊಂದರೆಯಾಗಿಲ್ಲವೇನು?

ಶ್ರೀ ಧರ್ಮಸಿಂಗ್ :- 240 ಜನರಿಗೆ ಈಗ ಆಲ್ಟರ್‌ನೇಟಿವ್ ಆಗಿ ಬೇರೆ ಕಡೆಗೆ ವ್ಯವಸ್ಥೆ ಮಾಡುವುದರ ಬಗ್ಗೆ ಸರ್ಕಾರ ವಿಚಾರ ಮಾಡುತ್ತದೆ.

ಶ್ರೀ ಡಿ.ಬಿ. ಚಂದ್ರೇಗೌಡ : ಮಾನ್ಯ ಅಧ್ಯಕ್ಷರೇ, ನಾನು ಕೇಳುತ್ತೇನೆ. This is a policy matter. The Government should come out with a clear statement. ಒಂದು ಟ್ಯಾಂಕ್ ಅಡಿಯಲ್ಲಿ ಮಾಡಿದರೆ ಅದು ಇಡೀ ರಾಜ್ಯಕ್ಕೆ ಹಬ್ಬಿಕೊಳ್ಳುತ್ತದೆ. ಒಂದು ಟ್ಯಾಂಕಿನ ಹಿಂಭಾಗ ಎಷ್ಟು ದೂರದ ಪ್ರದೇಶವನ್ನು ನೀವು ಕೊಡುವುದಿಲ್ಲ. ಎಫ್.ಟಿ.ಎಲ್. ಲೆವಲ್‌ನಿಂದ ಎಷ್ಟು ದೂರದ

ಪ್ರದೇಶವನ್ನು ನೀವು ಕೊಡುವುದಿಲ್ಲ ಎಂಬುದನ್ನು ತಿಳಿಸಬೇಕು. ಈ ನಿರ್ಬಂಧ ಇದ್ದಿದ್ದರೆ ಸುಮಾರು 40 ವರ್ಷಗಳಿಂದ ಈ ಜಮೀನನ್ನು ಇದುವರೆಗೂ ಮಾಡಿಕೊಂಡು ಬಂದಿದ್ದಾರಲ್ಲಾ ಅವರಿಗೆ ತೊಂದರೆ ಆಗುವುದಿಲ್ಲವೇ? ಹಾಗೆ ಆಗಿದ್ದರೆ ಮೊದಲಿನ ಕೆರೆಗೆ ಏನು ತೊಂದರೆ ಆಗಿದೆ? ಈ ಎರಡನ್ನು ಹೇಳಿ.

ಶ್ರೀ ಧರ್ಮಸಿಂಗ್ : ಮಾನ್ಯ ಅಧ್ಯಕ್ಷರೇ, ನಾವು ಏನಾದರೂ ಕೂಡ ಇರತಕ್ಕಂಥ ಕಡೆಯಲ್ಲಿ ಸಾಗುವಳಿ ಮಾಡಿರತಕ್ಕಂಥ 434 ಎಕರೆ ಜಮೀನಿನಲ್ಲಿ 248 ಜನರಿಗೆ ಕೊಡತಕ್ಕಂಥಾದ್ದು ಆದರೆ ಆ ಕೆರೆಯಲ್ಲಿ ಎರಡು ಕಿಲೋಮೀಟರ್ ದೂರ ಇದ್ದರೂ ಕೂಡ ಅಚ್ಚುಕಟ್ಟು ಪ್ರದೇಶಕ್ಕೆ ತೊಂದರೆ ಆಗುತ್ತದೆ. ನೀರುಕೊಡತಕ್ಕಂಥಾದ್ದಕ್ಕೆ ಹೂಳು ತುಂಬುತ್ತದೆ.

ಶ್ರೀ ಡಿ. ಬಿ. ಚಂದ್ರೇಗೌಡ : ಸರ್ಕಾರದವರು ಏನಾದರೂ ನಿಬಂಧನೆ ಹಾಕಿದ್ದಾರೆಯೇ? ನಿಬಂಧನೆಯ ಹಿಂಭಾಗದಲ್ಲಿ ಎಷ್ಟು ದೂರ ಇದೆ?

ಶ್ರೀ ಧರ್ಮಸಿಂಗ್ : ಮಾನ್ಯ ಅಧ್ಯಕ್ಷರೇ, ಇಲ್ಲಿ ಎಷ್ಟು ದೂರ ಎನ್ನತಕ್ಕಂಥಾದ್ದನ್ನು ಕೂಡ ನಾವು ಇನ್ನೂ ನಿಗಧಿ ಮಾಡಿ ಹೇಳುತ್ತೇವೆ. ಇಲ್ಲಿಯವರೆಗೂ ಕೂಡ ನಾವು ಕೆರೆ ಅಂಗಳದಲ್ಲೂ ಕೂಡ ಸೈಟ್ಸ್ ಮಾಡಿ ಕೊಡತಕ್ಕಂಥಾದ್ದು ಪರವಾನಿಗೆ ಕೊಡತಕ್ಕದ್ದು ಇದೆ. ಆದರೆ ಇಲ್ಲಿ ಜಿಲ್ಲಾಧಿಕಾರಿಗಳು ಲಾರ್ಜರ್ ಇಂಟ್ರೆಸ್ಟ್‌ನಿಂದ ಈ ಒಂದು ತೀರ್ಮಾನ ತೆಗೆದುಕೊಂಡಿದ್ದಾರೆ. ನಾವು ಯಾರಾದರೂ ಒಬ್ಬ ಖಾಸಗಿಯವರಿಗೆ ಕೊಟ್ಟಿಲ್ಲ. ಅಲ್ಲಿ ರೈತರಿಂದ ದೂರು ಏನು ಬಂದಿದೆ ಮನವಿ ಏನು ಬಂದಿದೆ ಅದನ್ನು ಆಧರಿಸಿ ಅದರ ಆಧಾರದ ಮೇಲೆ ನಾವು ಒಂದು ತೀರ್ಮಾನ ತೆಗೆದುಕೊಂಡಿದ್ದೇವೆ.

ವಿಷಯ : ಹರಿಜನಗಿರಿ ಜನರ ಉಂಬಳಿ ಜಮೀನನ್ನು ಖಾಯಂ ಮಾಡುವುದು.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 129(412)

ಶ್ರೀ ಕರಿಯಣ್ಣ (ಹೊಳೇಹೊನ್ನೂರು) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಹರಿಜನಗಿರಿಜನರ ಉಂಬಳಿ ಜಮೀನನ್ನು ಖಾಯಂ ಮಾಡಲು ಸಕಾಲದಲ್ಲಿ ನೀಡಲಾದ ಅರ್ಜಿಗಳನ್ನು ಸರ್ಕಾರದವರು ಪರಿಗಣಿಸಲು ಸೂಕ್ತಕ್ರಮ ಕೈಗೊಳ್ಳಲು ಆದೇಶಿಸುವವರೆ?

ಶ್ರೀ ಧರ್ಮಸಿಂಗ್ (ಕಂದಾಯ ಸಚಿವರು) :

ಅ) ಕರ್ನಾಟಕದಲ್ಲಿ ವಿವಿದ ಇನಾಂ ಜಮೀನುಗಳಿಗೆ ಬೇರೆ ಬೇರೆ ಇನಾಂ ಕಾಯ್ದೆಗಳಲ್ಲಿ ಇನಾಂದಾರರಿಗೆ ಹಕ್ಕನ್ನು ಕೊಡಲು ಅವಕಾಶ ಕಲ್ಪಿಸಿಕೊಡಲಾಗಿದೆ. ಎಲ್ಲಾ ಇನಾಂ ಕಾಯ್ದೆಗಳು 1954ರಿಂದ 1973ರ ಒಳಗೆ ಜಾರಿಗೆ ಬಂದಿದ್ದು ಈಗಾಗಲೇ ಬಹುತೇಕ ಪ್ರಕರಣಗಳಲ್ಲಿ ಇನಾಂ ಜಮೀನನ್ನು ಅರ್ಹರಿರುವವರಿಗೆ ಪುನರ್